503(698) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಜಲ ನಿರ್ಮಲ ಯೋಜನೆಯಡಿಯಲ್ಲಿ ಕಳೆದ 2 ವರ್ಷಗಳ ಅವಧಿಯಲ್ಲಿ (31ನೇ ಡಿಸೆಂಬರ್ 2006ರ ವರೆವಿಗೆ) ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಬಸವಕಲ್ಯಾಣ ಮತ ಕ್ಷೇತ್ರದಲ್ಲಿ ಎಷ್ಟು ಯೋಜನೆಗಳು ಕಾರ್ಯಗತವಾಗಿವೆ,

ಆ) ಇದಕ್ಕಾಗಿ ಇಲ್ಲಿಯವರೆವಿಗೆ ಮಂಜೂರು ಮಾಡಲಾದ ಮತ್ತು ಬಿಡುಗಡೆ ಮಾಡಲಾದ ಹಾಗೂ ವೆಚ್ಚ ಮಾಡಲಾಗಿರುವ ಹಣದ ಮೊತ್ತವೆಷ್ಟು, (ಮಂಜೂರು ವಿವರಗಳನ್ನು ಮತಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು),

ಇ) ಮೇಲ್ಕಂಡ ಯೋಜನೆಯಡಿಯಲ್ಲಿ ಎಷ್ಟು ಕಾಮಗಾರಿಗಳು ಪ್ರಗತಿಯಲ್ಲಿವೆ ಹಾಗೂ ಇವುಗಳನ್ನು ನಿಗದಿತ ಸಮಯದಲ್ಲಿ ಮುಕ್ತಾಯಗೊಳಿಸುವ ಬಗ್ಗೆ ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆಯೇ,

ಈ) ಹಾಗಿದ್ದಲ್ಲಿ, ಎಷ್ಟು ಅವಧಿಯಲ್ಲಿ ಈ ಕಾರ್ಯಕ್ರಮಗಳನ್ನು ಮುಕ್ತಾಯಗೊಳಿಸಲಾಗುವುದು,

ಉ) ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ಎಷ್ಟು ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ, (ಮತಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

ಊ) ಈ ಕಾಮಗಾರಿಗಳ ಅನುಷ್ಠಾನದಲ್ಲಿ ಅವ್ಯವಹಾರಗಳು ಪತ್ತೆಯಾಗಿವೆಯೇ, ಹಾಗಿದ್ದಲ್ಲಿ, ಸಂಬಂಧಪಟ್ಟವರ ಮೇಲೆ ಯಾವ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ಜಲ ನಿರ್ಮಲ ಯೋಜನೆ ಪ್ರಾರಂಭವಾದಾಗಿನಿಂದ ಈವರೆಗೆ ಬೀದರ್ ಜಿಲ್ಲೆಯಲ್ಲಿ ತಂಡ–2 ಮತ್ತು 3ರ ಅಡಿಯಲ್ಲಿ ಒಟ್ಟು 314 ನೀರು

ಸರಬರಾಜು ಯೋಜನೆಗಳು ಹಾಗೂ 202 ರಸ್ತೆ ಮತ್ತು ಚರಂಡಿ ಕಾಮಗಾರಿಗಳು ಕಾರ್ಯಗತವಾಗಿವೆ

ಬಸವಕಲ್ಯಾಣ ಮತಕ್ಷೇತ್ರದಲ್ಲಿ ತಂಡ–2ರ ಅಡಿಯಲ್ಲಿ 36 ನೀರು ಸರಬರಾಜು ಯೋಜನೆಗಳು ಮತ್ತು 36 ರಸ್ತೆ ಮತ್ತು ಚರಂಡಿ ಕಾಮಗಾರಿಗಳು ಹಾಗೂ ತಂಡ–3ರ ಅಡಿಯಲ್ಲಿ 19 ನೀರು ಸರಬರಾಜು ಯೋಜನೆಗಳು ಕಾರ್ಯಗತವಾಗಿವೆ

ಆ) ಜಲ ನಿರ್ಮಲ ಯೋಜನೆಯಡಿ ಬೀದರ್ ಜಿಲ್ಲೆಗೆ ಯೋಜನಾ ಪ್ರಾರಂಭದಿಂದ ಡಿಸೆಂಬರ್ 2006ರ ಮಾಸಾಂತ್ಯದವರೆವಿಗೂ ರೂ 8704 24 ಲಕ್ಷಗಳನ್ನು ಮಂಜೂರು ಮಾಡಲಾಗಿದ್ದು, ರೂ 6776 92 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ರೂ 6638 32 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ ಬೀದರ್ ಜಿಲ್ಲೆಯಲ್ಲಿ ಜಲ ನಿರ್ಮಲ ಯೋಜನೆಯ ಅನುಷ್ಠಾನಕ್ಕಾಗಿ ಮತಕ್ಷೇತ್ರವಾರು ಮಂಜೂರು ಮಾಡಿದ ಸಂಕ್ಷಿಪ್ತ ವಿವರವನ್ನು ಈ ಕೆಳಗೆ ನೀಡಲಾಗಿದ್ದು, ನೀರು ಸರಬರಾಜು, ರಸ್ತೆ ಮತ್ತು ಚರಂಡಿ, ಅಂತರ್ಜಲ ಮನಃಶ್ಚೇತನ, ವೈಯಕ್ತಿಕ ಶೌಚಾಲಯ ನಿರ್ಮಾಣ, ಶಾಲಾ ನೈರ್ಮಲೀಕರಣ ಮತ್ತು ಗ್ರಾಮ ಪಂಚಾಯತ್ ಸಬಲೀಕರಣಗಳನ್ನೊಳಗೊಂಡ ವಿವರವಾದ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ

(ರೂ ಲಕ್ಷಗಳಲ್ಲಿ)

ಕ್ರ. ಸಂ	ಮತಕ್ಷೇತ್ರದ ಹೆಸರು	ಮಂಜೂರು ಮಾಡಲಾದ ಅನುದಾನ	ಬಿಡುಗಡೆ ಮಾಡಲಾದ ಮೊತ್ತ	ವೆಚ್ಚ ಮಾಡಲಾದ ಮೊತ್ತ
1	ಔರಾದ್	1907 19	1396 06	1381 87
2	ಬಸವಕಲ್ಯಾಣ	1336 95	969 65	951 43
3	ಹುಲಸೂರು	1266 82	963 22	903 42
4	ಭಾಲ್ಕಿ	1499 00	1308 97	1305 69
5	ಬೀದರ್	1291 04	1076 16	1069 92
6	ಹುಮ್ನಾಬಾದ್	1403 24	1062 86	1025 99
	ಒಟ್ಟು	**8704 24**	**6776 92**	**6638 32**

ಇ) **ಬೀದರ್ ಜಿಲ್ಲೆ**

* ತಂಡ–2ರ ಅಡಿಯಲ್ಲಿ 208 ನೀರು ಸರಬರಾಜು ಯೋಜನೆಗಳ ಪೈಕಿ 200 ಯೋಜನೆಗಳು ಪೂರ್ಣಗೊಂಡಿರುತ್ತವೆ ಮತ್ತು ಉಳಿದ 8 ನೀರು ಸರಬರಾಜು ಯೋಜನೆಗಳು ಪ್ರಗತಿಯಲ್ಲಿವೆ

* ತಂಡ–2ರ ಅಡಿಯಲ್ಲಿ 202 ರಸ್ತೆ ಮತ್ತು ಚರಂಡಿ ಕಾಮಗಾರಿಗಳ ಪೈಕಿ 136 ರಸ್ತೆ ಮತ್ತು ಚರಂಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ ಉಳಿದ 66 ರಸ್ತೆ ಮತ್ತು ಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ

* ತಂಡ–3ರ ಅಡಿಯಲ್ಲಿ 106 ನೀರು ಸರಬರಾಜು ಯೋಜನೆಗಳ ಪೈಕಿ 2 ನೀರು ಸರಬರಾಜು ಯೋಜನೆಗಳು ಪೂರ್ಣಗೊಂಡಿದ್ದು, 19 ನೀರು ಸರಬರಾಜು ಯೋಜನೆಗಳು ಪ್ರಗತಿಯಲ್ಲಿರುತ್ತವೆ ಹಾಗೂ ಇನ್ನುಳಿದ 85 ನೀರು ಸರಬರಾಜು ಯೋಜನೆಗಳ ಪೈಕಿ 76 ಯೋಜನೆಗಳಿಗೆ ಗುತ್ತಿಗೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ ಮತ್ತು 9 ಯೋಜನೆಗಳಿಗೆ ಗುತ್ತಿಗೆ ಪ್ರಕ್ರಿಯೆ ಪ್ರಾರಂಭಿಸಬೇಕಾಗಿರುತ್ತದೆ

ಬಸವಕಲ್ಯಾಣ ಮತಕ್ಷೇತ್ರ

* ತಂಡ–2ರ ಅಡಿಯಲ್ಲಿ 36 ನೀರು ಸರಬರಾಜು ಯೋಜನೆಗಳ ಪೈಕಿ 34 ನೀರು ಸರಬರಾಜು ಯೋಜನೆಗಳು ಪೂರ್ಣಗೊಂಡಿರುತ್ತವೆ ಮತ್ತು ಉಳಿದ 2 ನೀರು ಸರಬರಾಜು ಯೋಜನೆಗಳು ಪ್ರಗತಿಯಲ್ಲಿರುತ್ತವೆ

* ತಂಡ–2ರ ಅಡಿಯಲ್ಲಿ 36 ರಸ್ತೆ ಮತ್ತು ಚರಂಡಿ ಕಾಮಗಾರಿಗಳ ಪೈಕಿ 25 ರಸ್ತೆ ಮತ್ತು ಚರಂಡಿ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಮತ್ತು ಉಳಿದ 11 ರಸ್ತೆ ಮತ್ತು ಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ

* ತಂಡ–3ರ ಅಡಿಯಲ್ಲಿ 19 ನೀರು ಸರಬರಾಜು ಯೋಜನೆಗಳ ಪೈಕಿ ಎಲ್ಲಾ 19 ನೀರು ಸರಬರಾಜು ಯೋಜನೆಗಳಿಗೆ ಗುತ್ತಿಗೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಈ ಪೈಕಿ 5 ನೀರು ಸರಬರಾಜು ಯೋಜನೆಗಳು ಪ್ರಾರಂಭಗೊಂಡಿರುತ್ತವೆ ಮತ್ತು ಉಳಿದ 14

ನೀರು ಸರಬರಾಜು ಯೋಜನೆಗಳಿಗೆ ಗುತ್ತಿಗೆ ಮೌಲ್ಯಮಾಪನ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ

ತಂಡ–2ರ 7 ಗ್ರಾಮಗಳ ನೀರು ಸರಬರಾಜು ಕಾಮಗಾರಿಗಳನ್ನು ಫೆಬ್ರವರಿ 2007ರೊಳಗೆ ಹಾಗೂ ಬಸವಕಲ್ಯಾಣ ತಾಲ್ಲೂಕಿನ ಹುಲಸೂರು ಗ್ರಾಮದ ನೀರು ಸರಬರಾಜು ಕಾಮಗಾರಿಯನ್ನು ಮೇ 2007ರೊಳಗೆ ಪೂರ್ಣಗೊಳಿಸಲು ಕಾಲಮಿತಿ ಹಾಕಿಕೊಳ್ಳಲಾಗಿದೆ

ತಂಡ–2ರ 66 ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಫೆಬ್ರವರಿ 2007ರೊಳಗೆ ಪೂರ್ಣಗೊಳಿಸಲು ಕಾಲಮಿತಿ ಹಾಕಿಕೊಳ್ಳಲಾಗಿದೆ

ತಂಡ–3ರ ಎಲ್ಲಾ 104 ನೀರು ಸರಬರಾಜು ಯೋಜನೆಗಳನ್ನು ಡಿಸೆಂಬರ್ 2007ರೊಳಗೆ ಪೂರ್ಣಗೊಳಿಸಲು ಕಾಲಮಿತಿ ಹಾಕಿಕೊಳ್ಳಲಾಗಿದೆ

ಈ) ಡಿಸೆಂಬರ್ 2007ರೊಳಗೆ ಈ ಕಾರ್ಯಕ್ರಮಗಳನ್ನು ಮುಕ್ತಾಯಗೊಳಿಸಲು ಉದ್ದೇಶಿಸಲಾಗಿದೆ

ಉ) ಜಲ ನಿರ್ಮಲ ಯೋಜನೆಯನ್ನು ಡಿಸೆಂಬರ್ 2007ರೊಳಗೆ ಮುಕ್ತಾಯಗೊಳಿಸಬೇಕಾಗಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ಯಾವುದೇ ಹೊಸ ನೀರು ಸರಬರಾಜು ಕಾಮಗಾರಿಗಳನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿರುವುದಿಲ್ಲ

ಊ) ಯಾವುದೇ ಅವ್ಯವಹಾರಗಳು ಕಂಡು ಬಂದಿರುವುದಿಲ್ಲ

ಅನುಬಂಧ /**ANNEXURE**

BATCH-II

(Amount in Lakhs)

Sl No	Name of the Constituency	Physical							Financial (Water Supply, Roads & Drains, Ground water recharge, School sanitation, HHL construction and GP strengthening)		
		No of Schemes undertaken from last 2 years		No of Schemes Completed		No of Schemes Under Progress		Time Schedule to complete the remaining schemes	Estimated Cost	Released Amount from DSU	Expenditure Incurred including CC & GP Contribution
		WS	R&D	WS	R&D	WS	R&D				
1	Aurad	46	45	45	30	1	15	Feb-07	1444 46	1314 92	1328 32
2	Basavakalyan	36	36	34	25	2	11		1025 64	913 43	911 99
3	Hulsur	24	20	22	10	2	10		1041 22	928 08	877 76
4	Bhalki	45	45	45	33	0	12		1204 72	1246 40	1252 59
5	Bidar	36	35	34	24	2	11		1008 54	943 72	946 00
6	Humnabad	21	21	20	14	1	7		966 18	920 87	912 08
	TOTAL	**208**	**202**	**200**	**136**	**8**	**66**		**6690 76**	**6267 42**	**6228 74**

BATCH-III

(Amount in Lakhs)

Sl No	Name of the constituency	Physical						Financial (In lakhs)		
		No of water supply schemes undertaken from last 2 years	No of water supply schemes tendered	No of water supply schemes commenced	No of water supply schemes completed	Time Schedule to complete the remaining water supply schemes		Estimated Cost	Released Amount	Expenditure Incurred
1	Aurad	31	30	9	2			462 73	81 14	53 55
2	Basavakalyan	19	19	5	0			311 31	56 22	39 44
3	Hulsur	11	10	1	0			225 60	35 14	25 66
4	Bhalki	17	11	2	0	Dec-07		294 28	62 57	53 10
5	Bidar	13	12	2	0			282 50	132 44	123 92
6	Humnabad	15	15	2	0			437 06	141 99	113 91
	TOTAL	106	97	21	2			2013 48	509 50	409 58